ಉಳ್ಳಾಲ ಪ್ರದೇಶದಲ್ಲಿ "T" ಗ್ರಾಯನ್ಸ್ ನಿರ್ಮಿಸುವ ಅಥವಾ STABI PLEGE ತಂತ್ರಜ್ಞಾನ ಅಳವಡಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ

ಇ) –ಹೌದು–

ಮೇಲೆ ವಿವರಿಸಿರುವಂತೆ ಯೋಜನೆಗಳು ಸರ್ಕಾರದ ಮುಂದೆ ಪರಿಶೀಲನೆಯಲ್ಲಿದ್ದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

ಈ) –ಹೌದು–

ಕೇಂದ್ರ ಪುರಸ್ಕೃತ ಯೋಜನೆಯಡಿ ಕುಂದಾಪುರ ತಾಲ್ಲೂಕು ಪಡುವರಿಯಲ್ಲಿ ರೂ 575 00 ಲಕ್ಷ ಅಂದಾಜು ವೆಚ್ಚದಲ್ಲಿ 1170 ಮೀ ಉದ್ದಕ್ಕೆ ತಡೆಗೋಡೆ ನಿರ್ಮಿಸುವ ಕಾಮಗಾರಿಯ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತಿದ್ದು ಶೀಘ್ರವಾಗಿ ಕಾಮಗಾರಿ ಪ್ರಾರಂಭಿಸಲಾಗುವುದು ರಾಜ್ಯದ ಕರಾವಳಿಯಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಸುಮಾರು 50 ಕಿ ಮೀ ಪ್ರದೇಶದಲ್ಲಿ 136 00 ಕೋಟಿ (ಪರಿಷ್ಕೃತ ಅಂದಾಜು ರೂ 292 00 ಕೋಟಿ) ಅಂದಾಜು ವೆಚ್ಚದಲ್ಲಿ ಕೇಂದ್ರ ಸರ್ಕಾರದ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ" ತಡೆಗೋಡೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು ಇದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ

379 (647) ಶ್ರೀ ಕೃಷ್ಣಾಪಾಲೇಮಾರ್ ಜೆ (ಸುರತ್ಕಲ್) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಂಚಾರ ಸುಧಾರಣೆಗಾಗಿ ಚಾಲನೆಗೊಂಡ ಬಿ–ಟ್ರಾಕ್ ಯೋಜನೆಗಳು ಯಾವುವು (ವಿವರ ಒದಗಿಸುವುದು),

ಆ) ಸದರಿ ಕಾರ್ಯಕ್ರಮದ ಪ್ರಗತಿಯೇನು

ಇ) ನಗರದ ವಿವಿಧ ಭಾಗಗಳಲ್ಲಿ ಉಂಟಾಗುತ್ತಿರುವ ಸಂಚಾರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ರೂಪಿಸಿದ ಯೋಜನೆಗಳು ಯಾವುವು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) .

ಅ) ಬೆಂಗಳೂರು ನಗರದ ಸಂಚಾರ ಸುಧಾರಣೆಗಾಗಿ ಚಾಳನೆಗೊಂಡ ಬಿ–ಟ್ರಾಕ್ ಯೋಜನೆಗಳು 2006ರಿಂದ ಆರಂಭಿಸಿ ಮುಂಬರುವ ವರ್ಷಗಳಲ್ಲಿ ಕೈಗೊಳ್ಳಲಾಗುವ ವಿವಿಧ ಯೋಜನೆಗಳು ಈ ಕೆಳಕಂಡಂತೆ ಇರುತ್ತದೆ

ವಿಷಯಗಳು	2006–07	2007–08	2008–09	2009–10	2010–11	ಒಟ್ಟು ಮೊತ್ತ
ಜಂಕ್ಷನ್ ಅಭಿವೃದ್ಧಿಗಳು	2 00	7 00	7 00	7 00	7 00	30 00
ರಸ್ತೆ ಸೌಲಭ್ಯ ರಸ್ತೆ ಸೌಕರ್ಯಗಳು, ರಸ್ತೆ ಗುರುತುಗಳು	5 00	23 75	23 75	23 75	23 75	100 00
ಇಂಟೆಲಿಜೆಂಟಾ ಟ್ರಾನ್ಸ್ ಪೋರ್ಟ್ ಸಿಸ್ಟಂ	30 00	30 00	30 00	30 00	30 00	150 00
ಸರ್ವೈಲೆನ್ಸ್/ಮಾನಿಟರಿಂಗ್ ಹಾಗೂ ಎನ್ ಫೋರ್ಸ್ ಮೆಂಟ್ ಕ್ಯಾಮೆರಾಗಳು ಇತ್ಯಾದಿ	5 00	11 25	11 25	11 25	11 25	50 00
ಶಿಕ್ಷಣ ಮತ್ತು ತರಬೇತಿ ಮತ್ತಿತರೆ	2 00	4 5	4 5	4 5	4 5	20 00
ಒಟ್ಟು ಮೊತ್ತ	44 00	76 5	76 5	76 5	76 5	350 00

2006–07ರ ಆರ್ಥಿಕ ವರ್ಷದಲ್ಲಿ ಬಿ–ಟ್ರ್ಯಾಕ್–2010 ಕಾರ್ಯಕ್ರಮದ ಯೋಜನೆಗಳು ಈ ಕೆಳಗಿನಂತಿರುತ್ತದೆ

1 10 ಪ್ರಮುಖ ವಲಯಗಳ (ಸಿಗ್ನಲ್ ಗಳ) ಕ್ರೋಡೀಕರಣ (ಏಕೀಕರಣ), ವಾಹನೋತ್ತೇಜಿತ ಸಿಗ್ನಲ್‌ಗಳನ್ನು ಅಳವಡಿಸುವುದರ ಮುಖಾಂತರ ಚುರುಕಾದ ಇಂಟೆಲಿಜೆಂಟ್ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆಯನ್ನು ಅಳವಡಿಸುವುದು ಮೆಟಾಲಿಕ್‌ನಿಂದ ಪಾಲಿಕಾರ್ಬೊನೇಟ್ ಸಿಗ್ನಲ್‌ಗೆ ಹಾಗೂ ಎನ್‌ಕ್ಯಾಂಡೆಸೆಂಟ್ ಬಲ್ಬ್ ನಿಂದ ಎಲ್‌ಇಡಿ ಬಲ್ಬ್ ಗಳಿಗೆ ದುರಸ್ತಿ ಅಥವಾ ನವೀಕರಣಗೊಳಿಸುವುದನ್ನೊಳಗೊಂಡಂತೆ ಹಾಲಿ ಈಗಿರುವ 165 ಸಂಚಾರ ಸಿಗ್ನಲ್ ಗಳ ಉನ್ನತೀಕರಣ/ಆಧುನಿಕರಣ ಗೊಳಿಸುವುದು

2 ಸಮಗ್ರ ಕೇಂದ್ರ ಪ್ರದೇಶ ಹಾಗೂ ಪ್ರಮುಖ ವಲಯ ಪ್ರದೇಶಗಳಲ್ಲಿ ಸಿಗ್ನಲ್ ಗಳ ಸಮಯ ಹಾಗೂ ಬಸ್ ಸಂಚಾರದ ಪ್ರಾಧಾನ್ಯತೆ ಇವುಗಳಿಗಾಗಿ ಅತ್ಯಾಧುನಿಕ ಏರಿಯಾ ಟ್ರಾಫಿಕ್ ಕಂಟ್ರೋಲ್ (ಎ ಟಿ ಸಿ–ಸಂಪರ್ಕಜಾಲ) ರೂಪಿಸುವ ಬಗ್ಗೆ ವಿವರವಾದ ಯೋಜನೆಯನ್ನು ತಯಾರಿಸುವುದು

3 ಕೇಂದ್ರ ನಿಯಂತ್ರಣ ಕೋಣೆಯೊಂದಿಗೆ ನಿಸ್ತಂತು ಸಂಪರ್ಕ ಹಾಗು ಸಾಫ್ಟ್‌ವೇರ್ ವ್ಯವಸ್ಥೆಯಿರುವ ಉನ್ನತ ಗುಣಮಟ್ಟದ ಟಿ ಪಿ ಜಡ್ ಕ್ಯಾಮೆರಾಗಳನ್ನು 50 ಜಂಕ್ಷನ್‌ಗಳಲ್ಲಿ ಅಳವಡಿಸುವುದರ ಮೂಲಕ ಸಂಚಾರದ ಹರಿವಿನ ನೇರ ವಿಡಿಯೋ ಪ್ರದರ್ಶನದ ವ್ಯವಸ್ಥೆಯಿಂದಾಗಿ ಸಂಚಾರವನ್ನು ಗುಣಾತ್ಮಕವಾಗಿ ಸುಗಮಗೊಳಿಸುವುದು

4 50 ಎಲ್ ಇ ಡಿ ವೇರಿಯಬಲ್ ಮೆಸೇಜ್ ಸಿಸ್ಟಂ (ಫಲಕಗಳು) ಅನ್ನು ಸ್ಥಾಪಿಸಿ ಸಂಚಾರ ಪರಿಸ್ಥಿತಿಯ ಬಗ್ಗೆ ಸ್ಥಗಿತಗಳ ಬಗ್ಗೆಮಾರ್ಗ ಬದಲಾವಣೆ ಬಗ್ಗೆ ಸಮಚಾರ ನಿರ್ವಹಣಾ ಕೇಂದ್ರದೊಂದಿಗೆ ಅಂತರ್ ಸಂಪರ್ಕ ಹೊಂದಿರುವ ವ್ಯವಸ್ಥೆಯಿಂದಾಗಿ ಸಾರ್ವಜನಿಕರಿಗೆ ಪೊಲೀಸರಿಂದ ಅಂತಹ ಮಾಹಿತಿಯನ್ನು ವಿ ಎಂ ಎಸ್ ಮೂಲಕ ಒದಗಿಸುವುದು ಹಾಗೂ ಎಚ್ಚರಿಸುವುದು

5 ಸಂಚಾರ ಜಾಗೃತಿಗಾಗಿ (ಎಚ್ಚರಿಸಲು) ವಿ ಎಂ ಎಸ್ ಸಂಪರ್ಕ ಮತ್ತು ರೇಡಿಯೋ ಸ್ಟೇಷನ್ ಗಳೊಂದಿಗೆ ಸಂಪರ್ಕವಿರುವ ಸಂಚಾರ ನೆರವು ಮೇಜಿನ (ಟ್ರಾಫಿಕ್ ಹೆಲ್ಪ್ ಡೆಸ್ಕ್) ನಿಸ್ತಂತು ನಿಯಂತ್ರಣ ಕೋಣೆಯಲ್ಲಿ ಸಿಗ್ನಲ್ ಗಳ ಸ್ಥಿತಿಗತಿಗಳನ್ನು ಬಿಂಬಿಸುವ ವಿಡಿಯೋ ಚಿತ್ರವನ್ನು ತೋರಿಸುವಂತಹ ಬೃಹತ್ ವಿಡಿಯೋ ಚಿತ್ರವನ್ನು ತೋರಿಸುವಂತಹ ಬೃಹತ್ ವಿಡಿಯೋ ಗೋಡೆಗಳನ್ನು ಹೊಂದಿರುವ ಅತ್ಯಾಧುನಿಕ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಕೇಂದ್ರ (ಟಿ ಎಂ ಸಿ) ವನ್ನು ಸ್ಥಾಪಿಸುವುದು

6 ಸ್ವಯಂಚಾಲಿತ ಸಂಚಾರ ನಿಯಮಜಾರಿ ಕ್ಯಾಮೆರಾಗಳನ್ನು ಅಳವಡಿಸುವುದರ ಮೂಲಕ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗಣಕೀಕೃತ ಕೇಂದ್ರದ ಮುಖಾಂತರ, ಕೆಂಪು–ಸಿಗ್ನಲ್ ಜಂಪ್ ನಂತಹ ಉಲ್ಲಂಘನೆಗಳು, ವಾಹನಗಳನ್ನು ಅತಿ ವೇಗದಿಂದ ಚಲಾಯಿಸುವಂತಹ ಉಲ್ಲಂಘನೆಗಳ ಬಗ್ಗೆ ಸ್ವಯಂಚಾಲಿತವಾಗಿ ಚಲನ್ನುಗಳನ್ನು ಹೊರಡಿಸುವುದು

7 ಸಂಚಾರ ಸೂಚನೆಗಳನ್ನು ನೀಡುವುದರ ಸಲುವಾಗಿ ಸಂಚಾರ ಪೊಲೀಸ್ ಬ್ಯಾರಿಕೇಡ್‌ಗಳು, ಪಥವಿಭಜನೆಗಾಗಿ ಟ್ಯೂಬುಲರ್ ಕೋನ್ಸ್ ಗಳು, ಸಿಕ್ಕೂಚಿ ಫಲಕಗಳು/ ಬೃಹತ್ ಗ್ಯಾಂಟ್ರಿಗಳನ್ನು ಸ್ಥಾಪಿಸುವುದು

8 ಪ್ರಧಾನ ಸಂಪರ್ಕ ರಸ್ತೆಗಳಲಿ ಧರ್ಮೋ ಪ್ಲಾಸ್ಟಿಕ್ ಬಣ್ಣದಿಂದ ರಸ್ತೆಗಳಿಗೆ ಬಣ್ಣ ಬಳಿಯುವುದು

9 ಸಂಚಾರ ಪೊಲೀಸರು ಮತ್ತಿತರ ತರಬೇತಿಗಾಗಿ ಅತ್ಯಾಧುನಿಕ ಸಂಚಾರ ತರಬೇತಿ ಶಾಲೆಯನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ರೂಪಿಸುವುದು

10 ಗಸ್ತು ವಾಹನಗಳನ್ನು ಒದಗಿಸುವುದು, ಟೋಯಿಂಗ್ ವಾಹನಗಳನ್ನು ಒದಗಿಸುವುದು ಮತ್ತು ಇಂಟರ್‌ಸೆಪ್ಟರ್ಸ್ ಮುಖಾಂತರ ಸಂಚಾರ ಪೊಲೀಸರ ಓಡಾಟದ ಗುಣಮಟ್ಟವನ್ನು ಹೆಚ್ಚಿಸುವುದು

11 ಸ್ವರಕ್ಷಣೆಯ ಉಪಕರಣಗಳನ್ನು ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಒದಗಿಸುವುದು ಸಂಚಾರ ಪೊಲಿಸ್‌ನ ಗಣಕೀಕೃತ ವ್ಯವಸ್ಥೆಯನ್ನು ಉತ್ತಮಪಡಿಸುವುದು ಹಾಗೂ ಸಂಚಾರ ಪೊಲೀಸ್ ವ್ಯವಸ್ಥೆಗೆ ಆಧುನಿಕ ಉಪಕರಣಗಳನ್ನು ಒದಗಿಸುವುದು

12 ಕೇಂದ್ರ ಪ್ರದೇಶದ ಅಭಿವೃದ್ಧಿ ಯೋಜನೆ, ಸ್ಥಳೀಯ ಪ್ರದೇಶಗಳ ಅಭಿವೃದ್ಧಿ ಯೋಜನೆ ಹಾಗೂ ಅಪಘಾತ ತಗ್ಗಿಸುವ ಯೋಜನೆ ಮುಂತಾದ ಸಂಚಾರ ನಿರ್ವಹಣಾ ಯೋಜನೆಗಳನ್ನು ತಯಾರಿಸಿ ಕಾರ್ಯಗತಗೊಳಿಸುವುದು

ಆ) ಬೆಂಗಳೂರು ನಗರದಲ್ಲಿನ ಸಂಚಾರ ಸುಧಾರಣೆಗಾಗಿ ರೂಪಿಸಿರುವ ಬಿ–ಟ್ರ್ಯಾಕ್ 2010 ಯೋಜನೆಗೆ ಒಟ್ಟು ರೂ 350 00 ಕೋಟಿಗಳನ್ನು ನಿಗಧೀಪಡಿಸಿದ್ದು, 2006–07ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ 73 ಪಿಒಪಿ 2006, ದಿನಾಂಕ 6 1 2007ರ ಆದೇಶದಲ್ಲಿ ಬಿ–ಟ್ರ್ಯಾಕ್ ಯೋಜನೆಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ರೂ 44 00 ಕೋಟಿಗಳಿಗೆ ಮಂಜೂರಾತಿ ನೀಡಿರುತ್ತದೆ ಸದರಿ ಮೊತ್ತವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL) ಬೆಂಗಳೂರುರವರಿಗೆ ಮುಂಗಡವಾಗಿ ರೇವಣಿಯಾಗಿ ಪಾವತಿಸಬೇಕಾಗಿರುತ್ತದೆ ಈ ಸಂಬಂಧ ಪ್ರಗತಿಕಾರ್ಯ ಮುಂದುವರೆದಿರುತ್ತದೆ ರವರು ರೂ 29 00 ಕೋಟಿಗಳಿಗೆ ಕಾರ್ಯಯೋಜನೆಯನ್ನು ರೂಪಿಸಿದ್ದು, ಈ ಸಂಬಂಧವಾಗಿ ಟೆಂಡರ್ ಕಾರ್ಯ ಪ್ರಗತಿಯಲ್ಲಿರುತ್ತದೆ

ಇ) ಕಾರ್ಯರೂಪಕ್ಕೆ ತಂದಿರುವ ಯೋಜನೆಗಳು

ನಗರದಲ್ಲಿ ಅಲ್ಲಲ್ಲಿ ಆಗುತ್ತಿರುವ ವಾಹನಗಳ ಸಂಚಾರದ ವ್ಯತ್ಯಯವನ್ನು ತಪ್ಪಿಸಿ ಹಾಗೂ ಸಂಚಾರವನ್ನು ಸುಗಮಗೊಳಿಸಲು ಏಕಮುಖ ಸಂಚಾರ ವ್ಯವಸ್ಥೆ, ಸಿಗ್ನಲ್ ಲೈಟ್ಸ್‌ಗಳ ಅಳವಡಿಕೆ, ರಸ್ತೆ ಅಗಲೀಕರಣ, ಹೊರ ವರ್ತುಲ ರಸ್ತೆ ನಿರ್ಮಾಣ, ಮೇಲ್ಸೇತುವೆ ನಿರ್ಮಾಣ, ಆಟೋಮೇಷನ್ ಎನ್‌ಫೋರ್ಸ್‌ಮೆಂಟ್ ಇತ್ಯಾದಿ ಕ್ರಮಗಳನ್ನು ಕೆಳಕಂಡಂತೆ ಕೈಗೊಳ್ಳಲಾಗಿದೆ

1 2005ನೇ ಸಾಲಿನಿಂದ ಈಚೆಗೆ ಪ್ರಮುಖ ರಸ್ತೆಗಳನ್ನು ಒಳಗೊಂಡಂತೆ ನಗರದ 96 ರಸ್ತೆಗಳನ್ನು "ಏಕಮುಖ ಸಂಚಾರ"

ಗೊಳಿಸಲಾಗಿದೆ ಇದರಿಂದಾಗಿ ಅತ್ಯಂತ ಸಂಚಾರ ದಟ್ಟಣೆ ಸಮಸ್ಯೆಗಳಿದ್ದಂತಹ ಹಲವಾರು ರಸ್ತೆಗಳಲ್ಲಿ ಸುಗಮ ಸಂಚಾರದ ವ್ಯವಸ್ಥೆಯಾಗಿದೆ

2 52 ಪ್ರಮುಖ ಜಂಕ್ಷನ್ ಗಳಲ್ಲಿ ಸೋಲಾರ್ ಶಕ್ತಿ ಚಾಲಿತ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿದ್ದು, ಪುರಭವನ ಪ್ರದೇಶದಲ್ಲಿನ '8' ಜಂಕ್ಷನ್ ಗಳಲ್ಲಿ ಏಕೀಕೃತ ಸ್ಪಂದನದ (Synchronization) ವ್ಯವಸ್ಥೆ ಮಾಡಲಾಗಿದೆ

3 ಮಧ್ಯಪಾನ ಮಾಡಿ ವಾಹನ ಡ್ರೈವ್ ಮಾಡುವವರ ವಿರುದ್ಧ "ಆಲ್ಕೊ ಮೀಟರ್ಸ್" ಬಳಕೆಯಿಂದ ತಪಾಸಣೆ ಮಾಡುವ ಕ್ರಮವನ್ನು ಜಾರಿಗೊಳಿಸಲಾಗಿದೆ

4 ಸ್ಪೀಡ್ ವಿಷನ್ ಕ್ಯಾಮೆರಾಗಳ ನೇರವಿನಿಂದ ಲೇಸರ್ ಮೂಲಕ ಮಿತಿಮೀರಿದ, ಅತಿವೇಗದಿಮದ ವಾಹನ ಟ್ರೈವ್ ಮಾಡುವವರ ವಿರುದ್ಧ ಕ್ರಮಕೈಗೊಳ್ಳಲಾಗಿದೆ

5 ಕಂಪ್ಯೂಟರ್ ಚಲನ್‌ಗಳ ಮೂಲಕ "ಆಟೋಮೇಟೆಡ್ ಎನ್ ಫೋರ್ಸ್‌ಮೆಂಟ್" (ಗಣಕೀಕೃತ ಸ್ವಯಂಚಾಲಿತ ಜಾರಿ ಕ್ರಮ) ಕ್ರಮವನ್ನು ಜಾರಿಗೊಳಿಸಲಾಗಿದೆ

6 ರಸ್ತೆಗಳಲ್ಲಿ ಪರಿಣಾಮಕಾರಿ "ಜಾರಿಕ್ರಮ" ಕೈಗೊಳ್ಳುವ ಸಲುವಾಗಿ "ಸಿಂಪ್ಯೂಟರ್ಸ್" ಗಳನ್ನು ಪರಿಚಯಿಸಲಾಗಿದೆ

7 ಅಪಘಾತ ತನಿಖೆಯಲ್ಲಿನ ಗುಣಮಟ್ಟ ಅಭಿವೃದ್ಧಿ ಪಡಿಸುವ ಸಲುವಾಗಿ ಸಂಚಾರ ವಲಯ ಮತ್ತು ಉಪ ವಲಯಗಳನ್ನು ಸಂಚಾರ ಪೊಲೀಸ್ ರಾಣೆಗಳಾಗಿ ಪರಿವರ್ತಿಸಲಾಗಿದೆ

8 ಸಂಚಾರ ಸಮಸ್ಯೆಗಳಿಗೆ ಅತಿ ಶೀಘ್ರವಾಗಿ ಕ್ಷಣ ಮಾತ್ರದಲ್ಲಿ ಸ್ಪಂದಿಸುವ ಸಂಚಾರಿ "ಕ್ರೋಬ್ರಾ" ಗಳನ್ನು (ಸುಸಜ್ಜಿತ ಮೋಟಾರ್ ಸೈಕಲ್‌ನಲಿ ಸತತ ಗಸ್ತು ತಿರುಗಿ ತಕ್ಷಣ ಸ್ಪಂದಿಸುವ ನುರಿತ ಮೋಟಾರ್ ಸೈಕಲ್ ಸವಾರರು) ಪರಿಚಯಿಸಲಾಗಿದ್ದು, ಈಗ "53" ಕೋಬ್ರಾಗಳು ನಗರದಲ್ಲಿ ಸಂಚಾರಿ ಕಾರ್ಯನಿರತವಾಗಿವೆ

9 ಆಟೋಗಳಲ್ಲಿ ಚಾಲಕರು ಡ್ರೈವಿಂಗ್ ಲೈಸೆನ್ಸ್ ವಿವರಗಳನ್ನು ಚಾಲಕರ ಸೀಟಿನ ಹಿಂಬದಿಯಲ್ಲಿ ಪ್ರದರ್ಶಿಸುವ ನಮೂನೆಯನ್ನು "Display Cards" ಗಳನ್ನು ಆಟೋ ಚಾಲಕರುಗಳಿಗೆ ವಿತರಿಸಲಾಗುತ್ತಿದೆ

10 ಬೆಂಗಳೂರು ನಗರದಲ್ಲಿ ಪ್ರಮುಖ ಸ್ಥಳಗಳಾದ ಬಸ್ ನಿಲ್ದಾಣ, ವಿಮಾನ ನಿಲ್ದಾಣ ಹಾಗೂ ರಸ್ತೆಗಳಲ್ಲಿ ನಾಗರೀಕರು ಆಟೋಗಳಿಗಾಗಿ ಕಾಯುವುದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದು, ಇವರನ್ನು ಆಟೋ ಚಾಲಕರುಗಳು ಕರೆದಲ್ಲಿಗೆ ಬರದೆ ಮತ್ತು ಪ್ರಯಾಣಿಕರಿಂದ ಹೆಚ್ಚಿನ

ಬಾಡಿಗೆಯನ್ನು ವಸೂಲಿ ಮಾಡುತ್ತಿರುವುದನ್ನು ಮನಗಂಡು ನಾಗರೀಕರಿಗೆ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸಲು 9 ಪ್ರಮುಖ ಸ್ಥಳಗಳಲ್ಲಿ ಮುಂಗಡ ಪಾವತಿ ಆಟೋರಿಕ್ಷಾ (Pre-Paid Auto Stand) ಸ್ಟಾಂಡ್‌ಗಳನ್ನು ತೆರೆಯಲಾಗಿದೆ

11 ಬೆಂಗಳೂರು ನಗರದ ಕೇಂದ್ರ ಪ್ರದೇಶದ ಹಲಸೂರು ಗೇಟ್, ಕಬ್ಬನ್ ಪಾರ್ಕ್, ಸದಾಶಿವನಗರ, ಶಿವಾಜಿನಗರ, ಹಲಸೂರು ಮತ್ತು ಉಪ್ಪಾರಪೇಟೆ ಏರಿಯಾಗಳ 14 ರಸ್ತೆಗಳಲ್ಲಿ ಸುಗಮ ಹಾಗೂ ಸುರಕ್ಷಿತ ಸಂಚಾರ ದೃಷ್ಟಿಯಿಂದ ಆಟೋರಿಕ್ಷಾಗಳಿಗಾಗಿಯೇ ಪ್ರತ್ಯೇಕ ಕಡ್ಡಾಯ ಪಥವನ್ನು ನಿಗದಿಪಡಿಸಿ ಆಟೋರಿಕ್ಷಾಗಳು ನಿರ್ದಿಷ್ಟ ಪಥದಲ್ಲಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ

12 ರಸ್ತೆಗಳಲ್ಲಿ ವಾಹನ ನಿಲುಗಡೆಯಾಗುತ್ತಿರುದ್ದುದರಿಂದ ರಸ್ತೆಯ-ಪೂರ್ಣ ಭಾಗವನ್ನು ವಾಹನಗಳ ಸಂಚಾರಕ್ಕೆ ಬಳಸಿಕೊಳ್ಳಲು ಅನುಕೂಲವಾಗುವಂತೆ ನಗರದಲ್ಲಿನ 26 ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಿ ಸುಗಮ ಸಂಚಾರಕ್ಕೆ ಕಳೆದ 6 ತಿಂಗಳುಗಳಿಂದ ಅನುವು ಮಾಡಿಕೊಡಲಾಗಿದೆ

13 ಎಸ್ ಎ ಆರ್ ಎಸ್ ಯೋಜನೆ ಅಡಿಯಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಶಾಲಾ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ

14 ಇಪ್ಪತ್ತು (20) ಜಂಕ್ಷನ್‌ಗಳಲ್ಲಿದ್ದಂತ ಹಳೆಯದಾದ ಸಿಗ್ನಲ್ ಲೈಟ್ ಗಳನ್ನು ತೆಗೆದು ಹೊಸ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ.

ಬೆಂಗಳೂರು ನಗರದಲ್ಲಿ ಸುಗಮ ಸಂಚಾರವನ್ನು ಸುಧಾರಣೆಗೊಳಿಸಲು ಮಾನ್ಯ ಮುಖ್ಯಮಂತ್ರಿಗಳು 10 ಅಂಶಗಳ ಕಾರ್ಯಕ್ರಮಗಳನ್ನು ಸೂಚಿಸಿದ್ದು, ಅವುಗಳ ವಿವರಗಳು ಈ ಕೆಳಗಿನಂತಿದೆ

ಅ) ಜಂಕ್ಷನ್ ಗಳನ್ನು ಮಾರ್ಪಾಡು ಮಾಡುವುದು

ಆ) ರಸ್ತೆ ಮೀಡಿಯನ್ ಗಳನ್ನು ಅಳವಡಿಸುವುದು

ಇ) ಬಸ್–ಬೇಗಳನ್ನು ನಿರ್ಮಿಸುವುದು

ಈ) ಆಟೋ ನಿಲ್ದಾಣಗಳನ್ನು ಸ್ಥಳಾಂತರಿಸುವುದು

ಉ) ವಾಹನಗಳ ನಿಲುಗಡೆ ವ್ಯವಸ್ಥೆಯನ್ನು ಉನ್ನತೀಕರಿಸುವುದು ಹಾಗೂ ಮಿನಿ ಪಾರ್ಕಿಂಗ್ ಲಾಟ್ ಗಳನ್ನು ನಿರ್ಮಿಸುವುದು

ಊ) ಪಾದಚಾರಿಗಳಿಗೆ ಫುಟ್‌ಪಾತ್‌ಗಳನ್ನು ನಿರ್ಮಿಸುವುದು

ಎ) ರಸ್ತೆಗಳಲ್ಲಿ ಸಂಚಾರಿ ಸೂಚನಾ ಫಲಕಗಳನ್ನು ಅಳವಡಿಸುವುದು

BLINK

BLINK

ತೀರ್ಪನ್ನು ನೀಡಿತ್ತು ಈ ತೀರ್ಪಿನ ವಿರುದ್ಧ ಕರ್ನಾಟಕ ರಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ ಹುಬ್ಬಳ್ಳಿಯು ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್ ಎಲ್‌ಪಿ ಸಂಖ್ಯೆ 3112–3314/2001 ನ್ನು ನಲ್ಲಿಸಿತ್ತು (ಸಿವಿಲ್ ಅಪೀಲು ಸಂಕ್ಯೆ 1861–2063/2001)

ಮೇಲ್ಕಂಡ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ದಿನಾಂಕ 10 4 2006 ರಂದು ತೀರ್ಪನ್ನು ನೀಡಿದ್ದು ಸಂಘದ ಸಿವಿಲ್ ಅಪೀಲನ್ನು ವಜಾಗೊಳಿಸಿದೆ ಸಂವಿಧಾನಾತ್ಮಕವಾಗಿ ನಿಗದಿ ಪಡಿಸಿದ ವಿಧಾನದ ಅನುಸಾರ ನೇಮಕಗೊಂಡ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಬಾರದೆಂದು ನ್ಯಾಯಾಲಯವು ಆದೇಶಿಸಿದೆ ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ಸಕ್ರಮಗೊಳಿಸಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ ನ್ಯಾಯಾಲಯದ ಈ ತೀರ್ಪಿನ ಪರಿಣಾಮವನ್ನು ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸನ್ನು ನೀಡಲು ದಿನಾಂಕ 27 12 2006ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ ಅದರ ಶಿಫಾರ್ಸನ್ನು ನಿರೀಕ್ಷಿಸಲಾಗಿದೆ

350 (654) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಪೂಜಾರಿ ಕೆ (ಬೈಂದೂರು) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಸಾಗರ ಪಟ್ಟಣದಲ್ಲಿ ಬ್ರಿಟೀಷರ ಕಾಲದಲ್ಲಿ ನಿರ್ಮಿಸಿದ ಸಾಗರ ಸಬ್ ಜೈಲು ತೀರಾ ಹಳೆಯದಾಗಿ ಬೀಳುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಕಟ್ಟಡವು ಹಳೆಯದಾಗಿದ್ದರೂ ಬೀಳುವಂತಹ ಪರಿಸ್ಥಿತಿಯಲ್ಲಿ ಇದಕ್ಕೆ ದುರಸ್ತಿ ಕಾರ್ಯ ಅಗತ್ಯವಿದೆ, ಈ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳು ಲೋಕೋಪಯೋಗಿ ಇಲಾಖೆಯನ್ನು ಕೋರಿದೆ